ಸರಿಯೆಂದು ಸಯೀದಾಳಿಗೆ ಖಚಿತವಾಯಿತು. ಮನದ ಉತ್ಕಟ ಬಯಕೆಯನ್ನು ಹಾಡಾಗಿಸಲು ಹಾಸಿಗೆಯಿಂದ ಎದ್ದು ನೀಳವಾಗಿ ಕುಳಿತು ಇನ್ನೇನು ಬಾಯಿತೆರೆದು: 'ಜೀವನ ರಾಗ, ಈ ಅನುರಾಗ' ಹಾಡಬೇಕು. ಅಷ್ಟರಲ್ಲಿ, ನಿದ್ದೆಯಲ್ಲೇ ಮಗ್ಗುಲು ಹೊರಳಿಸಿದ ಅಬ್ದುಲ್ ಹಮೀದ್ ಅರೆಗಣ್ಣು ತೆರೆದು ಚಿಂತಿತನಾಗಿ ಕೇಳಿದ: "ಏನು ವಿಷಯ ಸಯೀದಾ?"

"ಗಂಟಲು ಒಣಗಿದೆ. ನೀರು ತರಲು ಅಡುಗೆಮನೆಗೆ ಹೋಗಬೇಕೂಂತ ಎದ್ದೆ" ಎಂದು ಆಕೆ ಸಮಜಾಯಿಷಿ ನೀಡಿದಳು.

ಮರುದಿನ ಗಂಡ–ಮಕ್ಕಳು ಹೋದಮೇಲೆ ಭಾವೋನ್ಮಾದದಲ್ಲಿ ತನ್ನನ್ನೇ ಮರೆತು ಸಯೀದಾ ಪಾತ್ರೆಗಳನ್ನು ತೊಳೆವ ಸಿಂಕಿನ ಮುಂದೆ ಹಾಡುತ್ತ ನಿಂತಿದ್ದಳು. ಆಕೆ ಮತ್ತೆ ಅದೇ ಮಧುರ ಕಂಠದೊಂದಿಗೆ ಮುಖಾಮುಖಿಯಾಗಿದ್ದಳು. ಹೃದಯದಾಳದಿಂದ ಬಂದ, ದಿವ್ಯತೆಯನ್ನು ತುಂಬಿಕೊಂಡಿದ್ದ ದನಿ. ಆಕೆಗೆ ತಾನು ಸಯೀದಾಳೇ ಅಲ್ಲ, ಬೇರೊಂದು ಜೀವ ಅನ್ನಿಸಿತು. ಮುಸುರೆ ತಿಕ್ಕುವ, ಬಾಚಣಿಕೆಯಿಂದ ಕೂದಲು ಬಾಚಿಕೊಳ್ಳಲೂ ಸಮಯವಿಲ್ಲದೆ ತಲೆಗೆ ಬಟ್ಟೆ ಬಿಗಿದಿರುವ ಮಾಮೂಲಿ ಸಯೀದಳಿಗಿಂತ ಪೂರ್ತಿ ಭಿನ್ನವಾದ ಜೀವವಿದು. ಸಯೀದ, ಸೋಪಿನಿಂದ ಕೈಯುಜ್ಜಿ ತೊಳೆದು, ನೈಟಿಯ ಚುಂಗಿಗೆ ಒರೆಸುವುದು ಪೂರ್ತಿಯಾಗುವ ಮೊದಲೇ ಕನ್ನಡಿಯತ್ತ ಓಡಿದಳು. ಕನ್ನಡಿ ಎದುರು ನಿಂತು ನೋಡುತ್ತ ಹಾಡಿದಳು:

"ಜೀವನರಾಗ, ಈ ಅನುರಾಗ"

ಮತ್ತೊಮ್ಮೆ, ಮನಸ್ಸಿನ ಯಾವುದೋ ಮೂಲೆಯಿಂದ ಬಂದಂತಿದ್ದ ಆ ಆಳವಾದ ದನಿಗೆ ಪಾವಿತ್ರ್ಯವಿತ್ತು, ವಜ್ರದ ಹೊಳಪಿತ್ತು. ಆಕೆ ತದೇಕಚಿತ್ತದಿಂದ ಕನ್ನಡಿ ದಿಟ್ಟಿಸಿದಳು. ಆಕೆಯ ತುಟಿಗಳಲ್ಲಿ ಖುಷಿ ತುಳುಕುತ್ತಿತ್ತು; ಸಂತಸ ತುಂಬಿತ್ತು. ಅವಳ ಕೆನ್ನೆಗಳು ಗುಲಾಬಿಯಂತೆ ಕೆಂಪಾಗಿದ್ದವು. ಮೈಯಲ್ಲಿ ಅಡಗಿದ್ದ ಚಿಗುರು ರಕ್ತವನ್ನು ಚಿಮ್ಮಿಸುವಂತಿದ್ದವು, ಆಕೆಯ ಹುಬ್ಬುಗಳು ಸಂಗೀತಮೇಳವನ್ನು ನಿರ್ದೇಶಿಸುವ ವಾಗ್ಗೇಯಕಾರಳಂತೆ ಕುಣಿದವು. ಎಷ್ಟೋ ಸಮಯದ ಅನಂತರ ಆಕೆಗೆ ತಾನು ತುಂಬ ಚೆಲುವೆ ಎಂದೆನಿಸಿತು. ವಿನೋದ ತುಂಬಿದ ನೋಟದಿಂದ ತನ್ನ ಹುಬ್ಬುಗಳತ್ತ ನೋಡಿಕೊಂಡಾಕೆಗೆ ಬಹಳ ದಿನಗಳಿಂದ ಅವನ್ನು ಒಪ್ಪಮಾಡಿಲ್ಲವೆಂದೆನ್ನಿಸಿತು. ಮೂಗಿನ ಅಡಿಯಲ್ಲಿ ಒಂದೆರಡು ಮೀಸೆಯ ಎಳೆಗಳನ್ನು ಕಂಡು ತುಂಬ ಅವಮಾನವಾದಂತೆನ್ನಿಸಿತು. ತನ್ನ ಕೂದಲನ್ನು ಅಲಕ್ಷಿಸಿದ್ದಕ್ಕೆ ಅತೀವ ಬೇಸರ, ಕಡುಕೋಪ ಒತ್ತಿಬಂತು. ಅಷ್ಟೊಂದು ಮಧುರ ಸ್ವರದ ಸಾಂಗತ್ಯವಿರುವಾಗ ತಾನು ಹೇಗೆ ತಾನೆ ಇಷ್ಟೊಂದು ಮಲಿನವಾಗಿರಲು ಸಾಧ್ಯ? ತುಸು ನಿಂತು ಯೋಚಿಸಿ ಒಂದು ನಿರ್ಧಾರಕ್ಕೆ ಬಂದಳು. ನಾನು ಹಾಡಬೇಕೆಂದರೆ ನಾನು ಸುಂದರವಾಗಿದ್ದೇನೆಂದು ಅಂದುಕೊಳ್ಳಬೇಕು. ಹೌದು, ನಾನು ಹಾಗೆ ತಿಳಿದುಕೊಳ್ಳಲೇ ಬೇಕು.

ಅವಸರದಲ್ಲಿ ಬಟ್ಟೆ ತೊಟ್ಟ ಸಯೀದಾ, ಮನೆಗೆ ಬಂದ ಗಂಡ–ಮಕ್ಕಳಿಗಾಗಿ ತರಕಾರಿ ತರಲು ಅಂಗಡಿಗೆ ಓಡಿದಳು. ಗೊಂದಲದ ಮನಃಸ್ಥಿತಿಯಲ್ಲೇ ವ್ಯಾಪಾರವನ್ನು ಮುಗಿಸಿದಳು. ಮನಸ್ಸು ಎಲ್ಲೋ ಅಲೆಯುತ್ತಿತ್ತು. ತಾನು ಹಾಡುವುದನ್ನು ಹೇಗೆ, ಎಲ್ಲಿ ಆರಂಭಿಸಬೇಕು. ತನ್ನ ನಿರ್ಧಾರವನ್ನು ಅಬ್ದುಲ್ ಹಮೀದನಿಗೆ ಹೇಗೆ ತಿಳಿ ಹೇಳಬೇಕು? ಆಕೆಗೆ, ಚಲನಚಿತ್ರದ ನಾಯಕಿಯರು ಮಾಡುವಂತೆ, ತಮ್ಮ ಪರಮಾಪ್ತ ಗೆಳತಿಯರನ್ನು ಹುಡುಕಿಕೊಂಡು ಹೋಗಿ, ತನ್ನ ಮನದ ಗುಟ್ಟುಗಳನ್ನೆಲ್ಲ ಹೇಳಿ ನಿರಾಳವಾಗಬೇಕೆನ್ನಿಸಿತು. ಆದರೆ, ಮರುಕ್ಷಣವೇ, ತನ್ನ ಜೀವಕ್ಕೆ ಒಪ್ಪುವ ಪರಮಾಪ್ತ ಸಖ–ಸಖಿ ಯಾರೂ ಇಲ್ಲವೆನ್ನುವುದರ ಅರಿವಾಯಿತು! ತನ್ನ ತಂಗಿ–ತಾಯಿಯ ಹೊರತಾಗಿ, ಆದರೆ, ತಾನು ಈ ವಿಚಾರ ಹೇಳಿದಾಗ ಅವರಿಬ್ಬರ ಪ್ರತಿಕ್ರಿಯೆ ಏನಿರಬಹುದೆಂದು ಊಹಿಸಿದ ಆಕೆ ಅವರಿಬ್ಬರ ಬಳಿ ಹೋಗುವ ಸಾಧ್ಯತೆಯನ್ನು ತೆಗೆದುಹಾಕಿದಳು. ಇಬ್ಬರೂ ತಮಾಷೆ ಮಾಡುತ್ತ ಜೋರಾಗಿ ನಕ್ಕುಬಿಡಬಹುದು. ಈ ಹುಚ್ಚು ಕಥೆಯನ್ನು ಸಂಬಂಧಿಕರಿಗೆಲ್ಲ ಹೇಳಿ ಗೇಲಿಮಾಡಬಹುದು. ತನ್ನ ನೆರೆಮನೆಯ ಓಮ್ ಹಸನ್‌ಗೆ ಹೇಳೋಣವೆಂದುಕೊಂಡಳು. ಅವರಿಬ್ಬರ ಸಂಬಂಧ ಎಷ್ಟೇ ಹಾರ್ದಿಕವಾಗಿದ್ದರೂ ಗುಟ್ಟುಗಳನ್ನೆಂದೂ ಹಂಚಿಕೊಂಡಿರಲಿಲ್ಲ. ಜೀವನದಲ್ಲಿ ಮೊದಲಬಾರಿಗೆ, ಪ್ರತಿದಿನ ಕಾಫಿಹೌಸ್‌ನಲ್ಲಿ